ಪ್ರಜಾವಾಣಿ

**Monday, January 9, 2012**

### ಅಖಿಲ ಭಾರತ ಜೈನ್ ವಿವಿ ಕ್ರೀಡಾಕೂಟ

# ಎಸ್‌ಜೆಸಿಸಿ ತಂಡದ ಶುಭಾರಂಭ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಸೇಂಟ್ ಜೋಸೆಫ್ಸ್ ಕಾಮರ್ಸ್ ಕಾಲೇಜ್ (ಎಸ್‌ಜೆಸಿಸಿ) ತಂಡದವರು ಇಲ್ಲಿ ನಡೆಯುತ್ತಿರುವ ಜೈನ್ ವಿಶ್ವವಿದ್ಯಾಲಯ ಆಶ್ರಯದ ಅಖಿಲ ಭಾರತ ಕ್ರೀಡಾಕೂಟದ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಎಸ್‌ಜೆಸಿಸಿ ತಂಡ 8-6 ಗೋಲುಗಳಿಂದ (ಟೈಬ್ರೇಕರ್) ಎಸ್‌ಆರ್ ಎಂ ವಿಶ್ವವಿದ್ಯಾಲಯ ತಂಡವನ್ನು ಸೋಲಿಸಿತು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು 4-4 ಗೋಲುಗಳಿಂದ ಸಮಬಲ ಸಾಧಿಸಿದ್ದವು. ಎಸ್‌ಜೆಸಿಸಿ ತಂಡದ ಕುಟ್ಟಪ್ಪ (4ನೇ ನಿ.), ಶಾನ್ ಬೋಪಯ್ಯ (14ನೇ, 17ನೇ .) ಹಾಗೂ ಧನುಶಯ್ಯ (24ನೇ ನಿ.) ಗೋಲು ಗಳಿಸಿದರು. ಎಸ್‌ಆರ್‌ಎಂ ವಿವಿಯ ಶಿವಮಣಿ (21ನೇ, 22ನೇ ನಿ.), ಗುಣಶೇಖರ (28ನೇ ನಿ.) ಹಾಗೂ ಚಿನ್ನಸ್ವಾಮಿ (37ನೇ ನಿ.) ಚೆಂಡನ್ನು ಗುರಿ ಸೇರಿಸಿದ್ದರು.

ಟೈಬ್ರೇಕರ್‌ನಲ್ಲಿ ಎಸ್‌ಜೆಸಿಸಿ ನಾಲ್ಕು ಗೋಲು ಹಾಗೂ ಎಸ್‌ಆರ್‌ಎಂ ಎರಡು ಗೋಲು ಗಳಿಸಿದವು.

ಇನ್ನುಳಿದ ಪಂದ್ಯಗಳಲ್ಲಿ ಶ್ರೀಲಂಕಾದ ರಾಯಲ್ ಕಾಲೇಜ್ 8-0 ಗೋಲುಗಳಿಂದ ಜೈನ್ ಎಂಜಿನಿಯರಿಂಗ್ ಕಾಲೇಜ್ ಎದುರೂ, ಅಣ್ಣಾಮಲೈ ವಿವಿ 5-1 ಗೋಲುಗಳಿಂದ ಸೇಂಟ್ ಜೋಸೆಫ್ಸ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್ ವಿರುದ್ಧವೂ ಗೆಲುವು ಸಾಧಿಸಿದವು.

ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಹಿಂದೂಸ್ತಾನ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್ 60-20 ಪಾಯಿಂಟ್‌ಗಳಿಂದ ಜೈನ್ ವಿವಿ ಎದುರು ಜಯ ಗಳಿಸಿತು. ಮಹಿಳೆಯರ ವಿಭಾಗದಲ್ಲಿ ಜೈನ್ ವಿವಿ 46-12 ಪಾಯಿಂಟ್‌ಗಳಿಂದ ರಾಮ್ ಅಕಾಡೆಮಿ ತಂಡವನ್ನು ಪರಾಭವಗೊಳಿಸಿತು.